ಚರಿತ್ರೆಯಲ್ಲಿ ಮಹತ್ವದ್ದಾಗಿತ್ತು. 38 ವರ್ಷಗಳ ಹಿಂದೆ ಧಾರವಾಡದಲ್ಲಿ ನಮ್ಮನ್ನು ಬೆಳಕಿಗೆ ತಂದಿದ್ದ ನಾಡಿಗ ಈಗ ಮತ್ತೆ ಅಂಥದೇ ಒಂದು, ಭಿನ್ನ ಪತ್ರಿಕೆಯನ್ನು ಬಿಡುಗಡಿಸುತ್ತಿದ್ದ. ಆದರೆ, ಎಲ್ಲಿಯೂ ಚಂಪಾ ಅಥವಾ ಇಂದಿನ ಸಂಕ್ರಮಣವನ್ನು ಉಲ್ಲೇಖಿಸಿ ನೋವು, ಅಸಮಾಧಾನ ಹೇಳಲಿಲ್ಲ; ಸ್ವತಂತ್ರವಾಗಿ ಇಂದಿನ ಕನ್ನಡಕ್ಕೆ ಬೇಕಿದ್ದ ಸಾಹಿತ್ಯವನ್ನು 'ಸಂಕಲನ' ನೀಡುವಂತಾಗಲಿ ಎಂದು ಗಂಭೀರವಾಗಿಯೇ ಹರಸಿದ. ನಾನು ಅದನ್ನು ಯಶಸ್ವಿಯಾಗಿ ಏಳು ವರ್ಷ (2002-2008) ನಡೆಸಿದೆ.

* * *

ನಾನು 'ಸಂಕಲನ' ದ್ವೈಮಾಸಿಕ ಪತ್ರಿಕೆಯನ್ನು ನಿಲ್ಲಿಸಲು ನಿರ್ಧರಿಸಿದ್ದು ನಾಡಿಗನಿಗೆ ಸಮಾಧಾನವಾಗಿತ್ತು. 'ಅದು ನಿನ್ನ ರಚನಾತ್ಮಕತೆಯನ್ನು ತಿಂದು ಹಾಕುತ್ತಿತ್ತು, ಕನ್ನಡದಲ್ಲಿ ನಾವು ಎಷ್ಟು ಶ್ರಮಿಸಿದರೂ ನಮ್ಮನ್ನು ಪೋಷಿಸುವ, ಪ್ರಶಂಸಿಸುವ ಲೇಖಕರನ್ನು; ಹಣ ಕೊಟ್ಟು ಪುಸ್ತಕ-ಪತ್ರಿಕೆಗಳನ್ನು ಕೊಳ್ಳುವ ಮನಸ್ಸುಳ್ಳವರನ್ನು ಕಾಣುವುದು ಸಾಧ್ಯವೇ ಇಲ್ಲ. ಈಗ ಗಟ್ಟಿ ಮನಸ್ಸು ಮಾಡಿ ನಿಲ್ಲಿಸಿದ್ದೀ. ಇನ್ನು ಮುಂದೆ ಇಂಥ ಪ್ರಯತ್ನ ಮಾಡಬೇಡ' ಎಂದು ಸ್ಪಷ್ಟವಾಗಿ ಹೇಳಿದ (2008 ಡಿಸೆಂಬರ್ 8). 2002ರಲ್ಲಿ ಅದನ್ನು ಬಿಡುಗಡಿಸಿದ ಅವನೇ ಈಗ ನಿಲ್ಲಿಸಿದ್ದುದನ್ನು ಮೆಚ್ಚಿ ಹೇಳಿದ್ದುದರಲ್ಲಿ ನನ್ನ ಬಗ್ಗೆ ಅವನಲ್ಲಿದ್ದ ಕಳಕಳಿಯೇ ತುಂಬಿತ್ತು.

* * *

2012ರ ಕೊನೆ ಮತ್ತು 2013ರ ಆರಂಭದ ದಿನಗಳು ನಾಡಿಗನ ಭೌತಿಕ ಬದುಕಿನಲ್ಲಿಯೂ ಬಹಳ ಮುಖ್ಯವಾಗಿದ್ದವು. ಅದೆಲ್ಲವನ್ನೂ ವಿವರಿಸಿ, ಸಂತೋಷದಿಂದಲೇ ಹೇಳಿದ್ದ. ಇಷ್ಟು ವರ್ಷಗಳಿಂದ ಬನಶಂಕರಿಯಲ್ಲಿ ತಾನು ಕಟ್ಟಿಕೊಂಡು ವಾಸಿಸುತ್ತಿದ್ದ 'ಅಪೂರ್ವ' ಮನೆಯನ್ನು ಮಾರಿದ; ಸಾರಕ್ಕಿ ಗೇಟ್ ಬಳಿ ಸಿದ್ಧವಾಗಿದ್ದ 'ಮಯ ಇಂದ್ರಪ್ರಸ್ಥ'ದಲ್ಲಿ ಒಂದು ಪ್ರಶಸ್ತ ಮನೆ ಖರೀದಿಸಿದ. ತನ್ನ ನಿಸರ್ಗಪ್ರೀತಿಗೆ ಅನುಕೂಲವಾಗುವಂತೆ ಒಂದನೇ ಮಹಡಿಯಲ್ಲಿದ್ದರೂ ಇಲ್ಲಿ, ಮರ ನೆಡಲು, ಸಸ್ಯೋದ್ಯಾನ ಮಾಡಲು ಬೇಕಿದ್ದ ಮಣ್ಣು ತುಂಬಿದ ನೆಲದ ವ್ಯವಸ್ಥೆ ಮಾಡಿಕೊಂಡಿದ್ದ. ಮನೆಗೆ ಬಂದವರಿಗೆ ಮೊದಲು ಅದನ್ನೇ ತೋರಿಸುತ್ತಿದ್ದ. ಅಲ್ಲಿ ಕುಳಿತು ಬರೆಯುವ, ಮನೆಜನರೊಂದಿಗೆ ಮಾತಾಡುವ ಅವನ ಪ್ರೀತಿ ಕಳಸದಲ್ಲಿ ಕಳೆದ ತನ್ನ ಬಾಲ್ಯದ ದಿನಗಳನ್ನು ನೆನಪಿಸುತ್ತದೆ ಎಂದು ಹೇಳಿದ್ದ; ಹೀಗೆ ಹೇಳುವಾಗ ಅವನೇ ಕಳಸದ ಮನೆಯಲ್ಲಿದ್ದ, ಕರಿ ಅಜ್ಜ 'ಕಪ್ಪುದೇವತೆ'ಯಾಗಿ ಕಂಡಿದ್ದ. ಅವನು ಸೃಜಿಸಿದ 'ಶ್ರೀವತ್ಸ ಗೋತ್ರಗೀತ'ವನ್ನು ಹೊಸ ಮನೆಯಲ್ಲಿ ಹೋದಾಗ ಓದಿ ಹೇಳಿದ್ದ. ಅವನ ಮನಸ್ಸು ಈಗಷ್ಟೇ ಸರೋವರದಲ್ಲಿ ಮಿಂದು ಬಂದ ಸಂನ್ಯಾಸಿಯಂತೆ ನಿರಾಳವಾಗಿತ್ತು. ಅಸಮಾಧಾನಗಳನ್ನು ಕಳಚಿಕೊಂಡು ಉತ್ಸಾಹ, ಪ್ರೀತಿ, ನಿಷ್ಕಲುಷ ನಡೆ, ಶಾಂತಿಗಳ ನೆಲೆಯಾಗಿದ್ದ.

* * *

ನಾಡಿಗ ಈ ಮೊದಲೇ ಕನ್ನಡದ ಶ್ರೇಷ್ಠ ಕTeಗಳನ್ನು, ಜ್ಞಾನಪೀಠ ಪ್ರಶಸ್ತಿ ಪಡೆದವರ ಪರಿಚಯ ಕೃತಿಗಳನ್ನು ಸಂಪಾದಿಸಿದ್ದ (1983). ಭೈರಪ್ಪನವರ ಕೃತಿಗಳ ವಿಮರ್ಶಾ ಲೇಖನ ಸಂಕಲಿಸಿದ್ದ (2002). ಅದೇ ವರ್ಷ ಪಿ. ಶ್ರೀನಿವಾಸರಾವ್ ಅವರ ಸಮಗ್ರ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದ. ನಂತರ ಅವರ ಕವಿತೆಗಳ 'ರೂಟ್ಸ್ ಆಂಡ್ ವಿಂಗ್ಸ್' ಸಂಪಾದಿಸಿದ್ದ (2007). ಇದಾದ ನಂತರ ನಾಡಿಗನ ಜೀವನ ಗೋಪಾಲಕೃಷ್ಣ ಅಡಿಗರಿಗಾಗಿ ಸಮರ್ಪಿತವಾಗಿತ್ತು. ಏಳು ಸಂಪುಟಗಳಲ್ಲಿ ಅಡಿಗರ ಸಂಪೂರ್ಣ ಸಾಹಿತ್ಯವನ್ನು ಸಂಸ್ಕೃತಿ ಇಲಾಖೆಯವರಿಗಾಗಿ ಸಂಪಾದಿಸಿ ಕೊಟ್ಟಿದ್ದ (2011). ಇದಲ್ಲದೇ ಐತಿಹಾಸಿಕ ಮಹತ್ವ ಹೊಂದಿದ, ಸಾಹಿತ್ಯ ಚರಿತ್ರೆಯ ಅಂಗವೇ ಅನಿಸುವಂತಿದ್ದ ಅಡಿಗರ ಪತ್ರಗಳನ್ನು ಎಲ್ಲ ಮೂಲೆಗಳಿಂದ ಸಂಗ್ರಹಿಸಿ ಪ್ರಕಟಿಸಿದ್ದ (2012). ಅನ್ಯರಿಗಾಗಿ ಇಷ್ಟೆಲ್ಲ ಕೆಲಸ ಮಾಡುತ್ತಿದ್ದರೂ, ತನ್ನ ಸ್ವಂತದ ಕಾವ್ಯಕೃಷಿಯನ್ನೂ ಅಲಕ್ಷಿಸಿರಲಿಲ್ಲ. ಇತ್ತೀಚೆಗೆ ಬಂದ 'ಅಡಿಗರ ಪತ್ರಗಳು' ನನಗೆ ಕೊಟ್ಟ. ಇದು ಬಹಳ ಮಹತ್ವದ ಕೃತಿ. ಅಡಿಗರ ಪತ್ರಗಳನ್ನು ಹೊಂದಿಸಿ, ಪ್ರಕಟಿಸಿ, ಒಂದು ಪ್ರಬುದ್ಧ ಇತಿಹಾಸ ಭಾಗವನ್ನು ಉಳಿಸಿದ ನಾಡಿಗನ ಬಗ್ಗೆ ಗೌರವ ಹೆಚ್ಚಿತು. ಸಾಹಿತ್ಯ, ವಿಮರ್ಶೆ, ಆತ್ಮಕತೆ, ಡೈರಿ ಇತ್ಯಾದಿ ಹಲವು ವಿಷಯಗಳಿಗೆ ಮಹತ್ವದ ಆಕರವಾಗಿರುವ ಕೃತಿ ಇದು. ಇಂಥ ಅಮೂಲ್ಯ ಪತ್ರಗಳನ್ನು ಬರೆದ ಅಡಿಗರ ಚಿಂತನ, ಜೀವನ ಎರಡೂ ಉನ್ನತವಾಗಿದ್ದುದು ನಮ್ಮ ಸಾಹಿತ್ಯ ಚರಿತ್ರೆಯ ಕೌತುಕವೇ ಸರಿ. ನಾಡಿಗ ಇಂಥ ಕೌತುಕವನ್ನು